Investigation by the Anti-corruption Department of alleged correption against some Executive Engineers.

*ಪ್ರಶ್ನೆ 205.—ಶ್ರೀ ಬಿ. ಎಕ್ಷ್. ಬೋರಣ್ಣಗೌಡರು (ಹಾಸನ ಡಿಸ್ಟ್ರಿಕ್ಟ್-ಸಾರ್ವತ್ರಿಕ ಚುನಾವಣೆ ಸ್ಥಾನ).—ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಸಂಸ್ಥಾನದಲ್ಲಿರುವ ಎಗ್ಜೆಕ್ಯೂಟಿವ್ ಇಂಜನಿಯರುಗಳ ಸಂಖ್ಯೆ ಎಷ್ಟು ;

(b) ಕೆಲವು ಎಗ್ಜೆಕ್ಯೂಟಿವ್ ಇಂಜನಿಯರುಗಳು ಲಂಚರುಷುವತ್ತುಗಳನ್ನು ತೆಗೆದುಕೊಳ್ಳುತ್ತಾರೆಂದೂ ಮತ್ತು ಅವರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದೂ ಲಂಚನಿರೋಧ ಇಲಾಖೆಯ ಡೈರೆಕ್ಟರವರಿಗೆ ಅರ್ಜಿಗಳು ಬರುತ್ತಿರುವುದು ನಿಜವೆ ;

(c) ಆಂಥ ದೋಷಾರೋಪಣೆಗಳ ಬಗ್ಗೆ ತನಿಖೆಗಳು ಇನ್ನೂ ಪೂರ್ತಿಯಾಗದೇ ಇರುವಾಗ ಅಷ್ಟರಲ್ಲಯೆ, ದೋಷಾರೋಪಣೆಗೆ ಒಳಗಾಗಿರತಕ್ಕಂಥ ಒಬ್ಬರು ಎಗ್ಜೆಕ್ಯೂಟಿವ್ ಇಂಜನಿಯರಿಗೆ ಸೂಪರಿಂಟೆಂಡಿಂಗ್ ಇಂಜನಿಯರ ಸ್ಥಾನಕ್ಕೆ ಬಡ್ತಿ ಕೊಡುವಂತೆ ಶಿಫಾರಸು ಬಂದಿರುವುದು ನಿಜವೆ ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ನಡೆವರು).—

(a) 33.

(b) ಪ್ರಶ್ನೆಯು ಸ್ಪಷ್ಟವಾಗಿಲ್ಲ.

(c) ಮೇಲಿನ (b) ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಈ ಪ್ರಶ್ನೆಗೇ ಅವಕಾಶವಿಲ್ಲ.

ಶ್ರೀ ಬಿ. ಎಕ್ಷ್. ಬೋರಣ್ಣಗೌಡರು.—ಸಂಸ್ಥಾನದಲ್ಲಿ 33ಜನ ಎಗ್ಜೆಕ್ಯೂಟಿವ್ ಇಂಜನಿಯರುಗಳು ಇದ್ದಾರೆಂದು ಹೇಳಿದ್ದೀರಿ. ಅವರ ಪೈಕಿ ಯಾರ್ಯಾರು ಲಂಚ ತೆಗೆದು ಕೊಳ್ಳುತ್ತಾರೆಂದು ಲಂಚ ನಿರೋಧ ಇಲಾಖೆಯ ಡೈರೆಕ್ಟರಿಗೆ ಅರ್ಜಿ ಬಂದು ತನಿಖೆ ನಡೆಯುತ್ತಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು. —ತಮ್ಮ ಪ್ರಶ್ನೆ ಸರಿಯಾಗಿಲ್ಲ. ತಪಶೀಲು ಹೇಳಿದರೆ ಉತ್ತರ ಕೊಡ ಬಹುದು.

ಶ್ರೀ ಬಿ. ಎಕ್ಷ್. ಬೋರಣ್ಣಗೌಡರು.—ಹಾಸನದ ಎಗ್ಜೆಕ್ಯೂಟಿವ್ ಇಂಜನಿಯರ ಮೇಲೆ ಲಂಚದ ಆಪಾದನೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಲಂಚ ನಿರೋಧ ಇಲಾಖೆಯಿಂದ ತನಿಖೆಯಾಗುತ್ತಿದೆ.

ಶ್ರೀ ಬಿ. ಎಕ್ಷ್. ಬೋರಣ್ಣಗೌಡರು.—ಲಕ್ಕವಳ್ಳಿ ಪ್ರಾಜೆಕ್ಟಿನಲ್ಲಿರುವ ಶ್ರೀ ಕಪನೀಪತಿಭಟ್ಟರ ಮೇಲೆ ಲಂಚದ ಆಪಾದನೆಯಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನರು.—ತನಿಖೆಯಾಗುತ್ತಿದೆ.

ಶ್ರೀ ಬಿ. ಎಕ್ಷ್. ಬೋರಣ್ಣಗೌಡರು.—ಹಾಗೆ ದೂರು ಬಂದಿರುವಾಗ ಶ್ರೀ ಕಪನೀಪತಿಭಟ್ಟರನ್ನು ಸೂಪರಿಂಟೆಂಡಿಂಗ್ ಇಂಜನಿಯರಾಗಿ ನೇಮಕಮಾಡಬೇಕೆಂದು ಶಿಪಾರ್ಸಾಗಿದೆಯೆ ?

Mr. SPEAKER.—That does not arise

ಶ್ರೀ ಬಿ. ಎಕ್ಷ್. ಬೋರಣ್ಣಗೌಡರು.—(c) ಪ್ರಶ್ನೆಯಲ್ಲಿ ಈ ವಿಷಯ ನಮೂದಾಗಿದೆ.

The Hon'ble Sri T. MARIAPPA.—Sir, the question of recommendations cannot be the subject matter of debate here. Because it is a confidential matter.

Handing over Kunigal Stud Farm to the Race Club.

*ಪ್ರಶ್ನೆ 239. ಶ್ರೀ ಎಕ್ಷ್. ಹುಚ್ಚಮಾಸ್ತಿಗೌಡರು (ತುಮಕೂರು ಡಿಸ್ಟ್ರಿಕ್ಟ್—ಸಾರ್ವತ್ರಿಕ ಚುನಾವಣೆ ಸ್ಥಾನ).—ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಕುಣಿಗಲ್ 'ಸ್ಟಡ್' ಫಾರಮ್' ಕ್ಷೇತ್ರವು ಎಷ್ಟು ಎಕರೆಗಳ ಏರಿಯಾನನ್ನೊಳಗೊಂಡಿರುತ್ತದೆ ;

(b) 1951ನೆಯ ಇಸವಿಯ ಜನವರಿ 1ನೆಯ ತಾರೀಖಿನ ದಿನ ಆ 'ಸ್ಟಡ್ ಫಾರಮ್' ಕ್ಷೇತ್ರದಲ್ಲಿ ಎಷ್ಟು ಕುದುರೆಗಳಿದ್ದುವು ;

(c) ಈ ಕುದುರೆಗಳ ಪೈಕಿ ಮೈಸೂರು ಸರ್ಕಾರಕ್ಕೆ ಸೇರಿದುವುಗಳು ಎಷ್ಟು ;

(d) (i) 1935ನೆಯ ಇಸವಿಯಿಂದ 1950ನೆಯ ಇಸವಿ ಡಿಸೆಂಬರ್ ತಿಂಗಳವರೆಗೆ ಪ್ರತಿ ವರ್ಷವೂ ಈ 'ಸ್ಟಡ್ ಫಾರಮ್' ಸಂಬಂಧದಲ್ಲಿ ಉಂಟಾಗಿರತಕ್ಕ ವೆಚ್ಚವೆಷ್ಟು ;

(ii) ಈ 15 ವರ್ಷಗಳ ಕಾಲದಲ್ಲಿ ಪ್ರತಿವರ್ಷವೂ ಈ ಕ್ಷೇತ್ರದಿಂದ ಬಂದ ವರಮಾನವೆಷ್ಟು ;

(e) 'ಈ ಸ್ಟಡ್ ಫಾರಮ್' ಕ್ಷೇತ್ರವನ್ನು ಕೇಂದ್ರ ಸರ್ಕಾರದವರ ಹತೋಟಿಗೆ ಒಪ್ಪಿಸಲು ಉದ್ದೇಶಿಸಲಾಗಿದೆಯೆ ;

(f) ಅದನ್ನು 'ರೇಸ್ ಕ್ಲಬ್ಬಿ'ಗೆ ಒಪ್ಪಿಸಬೇಕೆಂದು ಉದ್ದೇಶಿಸಲಾಗಿದೆಯೆ ;

(g) ಅದನ್ನು 'ರೇಸ್ ಕ್ಲಬ್ಬಿ'ಗೆ ಒಪ್ಪಿಸುವುದರಿಂದ ಬರತಕ್ಕ ವಾರ್ಷಿಕ ವರಮಾನವೆಷ್ಟು ;

(h) 'ಸ್ಟಡ್ ಫಾರಮ್' ನಲ್ಲಿರುವ ಕಟ್ಟಡಗಳ ಸರಿಸುಮಾರು ಮೌಲ್ಯವೆಷ್ಟು ?

ಉತ್ತರ. ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಶಾಖೆಯ ನಡೆವರು).

(a) 468 ಎಕರೆಗಳು ಮತ್ತು ಒಂದು ಗುಂಟೆ.

(b) 53

(c) 19.

(d) (i ಮತ್ತು ii)

ವರ್ಷ		ವರಮಾನ ರೂ.ಗಳು		ವೆಚ್ಚ ರೂ.ಗಳ
1935—36	...	8,103	...	43,055
1936—37	...	11,708	...	43,585
1937—38	...	15,424	...	57,890
1938—39	...	48,405	...	60,963
1939—40	...	67,441	...	53,020
1940—41	...	30,311	...	64,920
1941—42	...	1,10,983	...	60,264
1942—43	...	81,813	...	67,191
1943—44	...	1,63,351	...	1,14,362
1944—45	...	1,49,118	...	1,00,702
1945—46	...	97,313	...	1,04,078
1946—47	...	59,200	...	1,83,732

1947—48	...	50,670	...	1,18,395
1948—49	...	95,342	...	1,20,609
1949—50	...	48,148	...	88,323
1950ನೆಯ ಡಿಸೆಂಬರ್ ತಿಂಗಳವರೆಗೆ		65,902	...	72,223

(e) ಇಲ್ಲ.

(f) ಇಲ್ಲ.

(g) ಮೇಲಿನ (f) ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿದರೆ ಈ ಪ್ರಶ್ನೆಗೆ ಅವಕಾಶವಿಲ್ಲ.

(h) 74,329 ರೂಪಾಯಿಗಳು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—(b) ಪ್ರಶ್ನೆಗೆ ಉತ್ತರವಾಗಿ 53 ಕುದುರೆಗಳನ್ನು ಸಾಕುತ್ತಿದೆಯೆಂದು ಹೇಳಿದೆ. ಅವೆಲ್ಲಾ ಜೂಜಿನ ಕುದುರೆಗಳೆ ?

*ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—19 ಸರ್ಕಾರಿ ಕುದುರೆಗಳಿವೆಯೆಂದು ಹೇಳಿದೆ. ಹಾಗಾದರೆ ಉಳಿದ ಕುದುರೆಗಳು ಯಾರಿಗೆ ಸೇರಿವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ಖಾಸಗಿ ಜನರಿಗೂ ಮತ್ತೆ ಕೆಲವು ರೇಸ್ ಕ್ಲಬ್ಬಿಗೂ ಸೇರಿವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅದಕ್ಕೆ ಆಗುವ ಖರ್ಚನ್ನು ಸಂಬಂಧಪಟ್ಟವರಿಂದ ವಸೂಲು ಮಾಡುತ್ತಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾಡುತ್ತಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಕುದುರೆ ಓಂದಕ್ಕೆ ಎಷ್ಟು ತೆಗೆದುಕೊಳ್ಳುತ್ತಾರೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಜೂಜಿನ ಕುದುರೆಗಳನ್ನು ಸಾಕುತ್ತಿದ್ದೇವೆಂದು ಹೇಳುತ್ತೀರಿ. ಈಗ ಇತರ ಕಡೆ ಜೂಜಿನ ಕ್ಲಬ್ಬುಗಳನ್ನಿಟ್ಟಿರುವುದು ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಜೂಜನ್ನು ನಡೆಸುವುದಕ್ಕೆ ಈ ಮುಖಾಂತರ ಪ್ರೋತ್ಸಾಹ ಸಿಕ್ಕುತ್ತಿದೆಯೆಂದು ಹೇಳುವುದಕ್ಕೆ ಸಾಧ್ಯವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇದರಿಂದ ಜೂಜಿನ ಪ್ರಶ್ನೆ ಏಳುವುದಿಲ್ಲ. ಜೂಜಿನ ಕುದುರೆಗಳನ್ನು ಸಾಕುವುದಕ್ಕೆ ಮಾತ್ರ ಈ ಪ್ರಶ್ನೆ ಸಂಬಂಧಪಟ್ಟಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಒಂದೊಂದು ಕೇಂದ್ರದಲ್ಲಿ ಕುದುರೆ ಸಾಕುವುದರಿಂದ ಎಷ್ಟೆಷ್ಟು ವರಮಾನ ಬರುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒಂದೊಂದು ಕಡೆ ಒಂದೊಂದು ರೀತಿ ಇರುತ್ತದೆ. ಆದರಲ್ಲಿ ವೈತ್ಯಾಸವಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಈ ಕುದುರೆಗಳಿಗಾಗಿ ಬಹಳ ಹೆಚ್ಚು ಖರ್ಚು ಆಗುತ್ತಿರುವುದನ್ನು ಕಡಮೆ ಮಾಡುವುದಕ್ಕೆ ಏರ್ಪಾಡಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬೇಕಾದಷ್ಟು ಎಕಾನಮಿ ಮೆಷರ್ಸ್ ಇವೆ. ಈಚೆಗೆ ಬಹಳಮಟ್ಟಿಗೆ ಖರ್ಚು ಕಡಮೆಯಾಗಿದೆ. ಮೊನ್ನೆತಾನೆ 1950–51ರಲ್ಲಿ 5-6 ಕುದುರೆಗಳನ್ನು ಬೊಂಬಾಯಿನಲ್ಲಿ ಮಾರಿದಾಗ 40 ಸಾವಿರ ರೂಪಾಯಿಗಳವರೆಗೂ ನಫೆ ಬಂದಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—(d) ಪ್ರಶ್ನೆಗೆ ಉತ್ತರ ಕೊಟ್ಟಿರುವ ಪ್ರಕಾರ ನಾಲ್ಕು ವರ್ಷದಲ್ಲಿ ಖರ್ಚು ಉತ್ಪತ್ತಿಗಿಂತ ಕಡಮೆಯಾಗಿರಲು ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮಲ್ಲಿ ಹೆಣ್ಣು ಕುದುರೆ ಹೆಚ್ಚಾಗಿದ್ದುದನ್ನು ಕೊಟ್ಟುಬಿಟ್ಟಿದೆ. ಅದೂ ಅಲ್ಲದೆ ಮರಿಗಳು ಹುಟ್ಟುವುದು ಕಡಿಮೆಯಾಗಿದೆ. ಹೆಣ್ಣು ಕುದುರೆಗಳನ್ನು ಖಾಸಗೀ ಜನರು ಕೂಡ ಕೊಟ್ಟಿದ್ದಾರೆ. ಆದ್ದರಿಂದ ಕುದುರೆ ವಾರುವುದರಲ್ಲಿ ಬರುವ ನಫೆಯಲ್ಲಿ ಅವರಿಗೂ ನಮಗೂ ಇಷ್ಟು ಬರಬೇಕು ಎಂದು ಒಪ್ಪಂದವಿದೆ. ಈ ಕಾರಣದಿಂದ ಅದಕ್ಕೆ ತಕ್ಕಂತೆ ಕಡಿಮೆಯಾಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—1942, 1943 ಮತ್ತು 1944ರಲ್ಲಿ ಉತ್ಪತ್ತಿಗಿಂತ ಖರ್ಚು ಏಕೆ ಕಡಮೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವರ್ಷಗಳಲ್ಲಿ ಉತ್ಪತ್ತಿ ಹೆಚ್ಚಾಗಿ ಬಂದಿದೆ. ಹೆಚ್ಚು ಮರಿ ಮಾರಾಟವಾಗಿದೆ. ಇನ್ನೂ ಅನೇಕ ಕಾರಣಗಳಿಂದ ಅದು ವೈತ್ಯಾಸವಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಆ ಕಾರಣಗಳೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವಿಚಾರ ಮಾಡುತ್ತೇವೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹೆಣ್ಣು ಕುದುರೆಗಳನ್ನು ಹೆಚ್ಚಾಗಿ ರೇಸ್‌ಕ್ಲಬ್ಬಿಗೆ ಕೊಟ್ಟಿರುವುದು ಯಾವಾಗ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಒಂದೂವರೆ ವರ್ಷದ ಹಿಂದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಅದಕ್ಕೆ ಮುಂಚೆ ಖರ್ಚು ಹೆಚ್ಚುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೆಲವು ವಯಸ್ಸಾದ ಕುದುರೆಗಳಿರುತ್ತವೆ. ಅವು ಹೆರುವುದಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—15 ವರ್ಷದ ಲೆಕ್ಕ ಕೊಟ್ಟಿರುವುದರಲ್ಲಿ 1935ನೆಯ ಇಸವಿಯಿಂದ 1940ರವರೆಗೆ ಹೆಣ್ಣು ಕುದುರೆ ಹೆಚ್ಚಾಗಿದ್ದುದರಿಂದ ಉತ್ಪತ್ತಿ ಹೆಚ್ಚಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1935–36 ರಲ್ಲಿ ವರಮಾನ ಕಡಮೆ, ಖರ್ಚು ಹೆಚ್ಚು. ಕೆಲವು ಕಾಲದಲ್ಲಿ replenish ಮಾಡುತ್ತಿಲ್ಲ.

ಶ್ರೀ ಎ. ಭೀಮಪ್ಪನಾಯಕರು (ಚಿತ್ರದುರ್ಗ ಜಿಲ್ಲೆ).—ಸ್ವತಂತ್ರ ಭಾರತದಲ್ಲಿ ಒಳ್ಳೆಯ ಕುದುರೆ ತಳಿಯನ್ನು ಬೆಳೆಸುವುದು ದೇಶದ ಹಿತದೃಷ್ಟಿಯಿಂದ ಬಹಳ ಒಳ್ಳೆಯದಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಜೀಣರ ಅಭಿಪ್ರಾಯ ಹಾಗಿದೆ.

ಶ್ರೀ ಎ. ಭೀಮಪ್ಪನಾಯಕರು.—ಆದ್ದರಿಂದ ಒಳ್ಳೆಯ ಬ್ರೀಡಿಂಗಿಗೆ ಅನುಕೂಲವಾಗುವ ಕುದುರೆಗಳನ್ನು ಬೆಳೆಸುವುದು ಅತ್ಯಗತ್ಯವಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ದೃಷ್ಟಿಯಿಂದಲೇ ಈಗ ಕಾಣಿಗಲ್ ಸ್ವಡ್‌ಫಾರಂನಲ್ಲಿ ಬೇಕಾದಷ್ಟು ಸುಧಾರಣೆ ಮಾಡಿದೆ. ಇನ್ನು ಎರಡು ವರ್ಷದಲ್ಲಿ ಅದು ಸ್ವಪರಿಪೂರ್ಣತೆಯನ್ನು ಹೊಂದಬಹುದೆಂಬ ನಿರೀಕ್ಷೆ ಇದೆ.

ಶ್ರೀ ಎ. ಭೀಮಪ್ಪನಾಯಕರು.—ಕಾಣಿಗಲ್ ಸ್ವಡ್‌ಫಾರಂನಲ್ಲಿ ಹುಲ್ಲು ಬೆಳೆಯತಕ್ಕ ಜಾಗ, ಬೆಳೆಯುವ ಹುಲ್ಲು, ವಾತಾವರಣ, ಹವಾಮಾನ ಇವೆಲ್ಲಾ ಕುದುರೆಗಳ ಬೆಳವಣಿಗೆಗೆ ಬಹಳ ಒಳ್ಳೆಯದಾಗಿವೆ ಎಂದು ವಿಜ್ಞಾನಿಗಳು ಹೇಳಿದ್ದಾರಲ್ಲವೇ ?

The Hon'ble Sri T. MARIAPPA.— It is stated that in respect of place and climate the Kunigal Stud Farm is the best in India.

ಶ್ರೀ ಎ. ಭೀಮಪ್ಪನಾಯಕರು.—ನಮ್ಮಲ್ಲೇ ತಯಾರಾದ ಮ್ಯಾನೇಜರನ್ನು ಇಟ್ಟುಕೊಂಡು ಹೆಸರುಘಟ್ಟದಲ್ಲೂ ಕೂಡ ಇಂಥಾ ಒಂದು ಸ್ಟಡ್‌ಫಾರಂ ಮಾಡಿ ಬೆಳೆಸಬೇಕೆಂದು ಆಲೋಚನೆ ಇದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಆಲೋಚನೆ ಮಾಡುತ್ತಾ ಇದ್ದೇವೆ. ನಮ್ಮಲ್ಲಿ ಕೆಲವರು ಟ್ರೈನ್‌ಅಪ್ ಆಗಿದ್ದಾರೆ. ಅವರ ಸಹಾಯ ತೆಗೆದುಕೊಳ್ಳಬೇಕೆಂದು ಸರ್ಕಾರದ ಆಲೋಚನೆ ಇದೆ.

ಶ್ರೀ ಎ. ಭೀಮಪ್ಪನಾಯಕರು.—ಕುಣಿಗಲ್ ಸ್ಟಡ್ ಫಾರಂನಲ್ಲಿ ಈಗಿರತಕ್ಕ ಮ್ಯಾನೇಜರಿಗೆ ಕೊಡುತ್ತಾ ಇರುವ ಸಂಬಳ ಎಷ್ಟು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರಿಗೆ 1,000 ರೂಪಾಯಿ ಕೊಡುತ್ತಾ ಇದೆ.

ಶ್ರೀ ಎ. ಭೀಮಪ್ಪನಾಯಕರು.—100–150 ರೂಪಾಯಿ ಸಂಬಳ ತೆಗೆದುಕೊಂಡು ಅಷ್ಟೇ ಜೆನ್ನಾಗಿ ಕೆಲಸ ಮಾಡತಕ್ಕವರು ನಮ್ಮಲ್ಲಿ ಇದ್ದಾರೆ ಅಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಿಪುಣರಿಗೆ ಸಾಮಾನ್ಯವಾಗಿ ಜಾಸ್ತಿ ಕೊಡಬೇಕಾಗುತ್ತದೆ. ಅವರು foreign expert ಆಗಿದ್ದರಿಂದ ಆಗ ಜಾಸ್ತಿಯಾಗಿ ನಿಗದಿ ಮಾಡಿಕೊಟ್ಟಿದ್ದಾರೆ. ಅದೂ ಸಹ ಸರ್ಕಾರದವರ ಆಲೋಚನೆಯಲ್ಲಿದೆ.

ಶ್ರೀ ಎ. ಭೀಮಪ್ಪನಾಯಕರು.—ಅವರ ಕಾಂಟ್ರಾಕ್ಟು ಯಾವಾಗ ಮುಗಿಯುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕಾಂಟ್ರಾಕ್ಟು ಅಂತ ಅಲ್ಲ. ಅದು confirm ಆಗಿದೆ. ಅದರ ಮೇಲೆ depend ಆಗುತ್ತದೆ.

ಶ್ರೀ ಎ. ಭೀಮಪ್ಪನಾಯಕರು.—ಜಾಗ್ರತೆ ಬದಲಾವಣೆ ಮಾಡಿ, ಅವರ ಸ್ಥಾನಕ್ಕೆ ನಮ್ಮವರನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮ್ಮವರನ್ನೇ ನೇಮಕ ಮಾಡಬೇಕೆಂಬ ಅಭಿಪ್ರಾಯ ಸರ್ಕಾರದವರಿಗೆ ಇದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಕಳೆದ ಮೂವತ್ತು ವರ್ಷದ ಅವಧಿಯಲ್ಲಿ ಈ ಫಾರಂ ಮುಚ್ಚಬೇಕೆಂದು ಯಾವಾಗಲಾದರೂ ನ್ಯಾಯವಿಧಾಯಕ ಸಭೆಯಲ್ಲಿ ಅಭಿಪ್ರಾಯವಿತ್ತೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಬಿ. ಹುಚ್ಚೇಗೌಡರು.—ಈ 19 ಕುದುರೆಗಳಿಗೆ 468 ಎಕರೆ ಪ್ರದೇಶದ ಅವಶ್ಯಕತೆ ಇದೆ ಎಂದು ತಮ್ಮ ಭಾವನೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿರುವುದು 19 ಕುದುರೆಗಳು ಮಾತ್ರ ಅಲ್ಲ. ಹಿಂದಿನ ಪುಟದಲ್ಲಿ ಮುದ್ರಣ ಆಗಿರುವ ಅಂಕಿಯನ್ನು ನೋಡಿ–53 ಕುದುರೆಗಳು ಇವೆ.

ಶ್ರೀ ಬಿ. ಹುಚ್ಚೇಗೌಡರು.—ಅವು ತಾತ್ಕಾಲಿಕವಾಗಿ ಇವೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆದರೂ ಕೂಡ full complement ಇದ್ದರೆ ಆ ಪ್ರದೇಶ ಸಾಲದು ಎಂದು ತೋರಿ ಬರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—468 ಎಕರೆ ಪ್ರದೇಶದಲ್ಲಿ ತರಿ, ಬಾಗಾಯ್ತು, ಖುಷ್ಕಿ ಎಷ್ಟು ಎಕರೆ ಇದೆ ಸ್ವಾಮಿ ?

The Hon'ble Sri T. MARIAPPA.— Mainly pasture lands. I think about 20 acres may be wet lands. I am not sure. I want notice to give the correct particulars.

ಶ್ರೀ ಬಿ. ಹುಚ್ಚೇಗೌಡರು.—ಈ ಜಮೀನು ಹರಾಜು ಹಾಕಿದರೆ ಒಂದು ಎಕರೆಗೆ ನಾಲ್ಕೈದು ಸಾವಿರ ರೂಪಾಯಿ ಬರುತ್ತದೆ ಎಂದು ಗೊತ್ತೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ ಹುಚ್ಚೇಗೌಡರು.—19 ಕುದುರೆಗಳನ್ನು ನೋಡಿಕೊಳ್ಳಲು ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳತಕ್ಕ ಒಬ್ಬ ಅಧಿಕಾರಿಯ ಅವಶ್ಯಕತೆ ಇದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಾವು ಮಾಡಿದ್ದಲ್ಲ. ಈಗ ಅಲ್ಲಿ ಇರುವವರು foreign expert Irlandನಿಂದ ಕರೆಸಿಕೊಂಡರು, ಅದಕ್ಕೆ ಆಷ್ಟು ಕೊಡಬೇಕಾಯಿತು. ಇನ್ನು ಮುಂದೆ ನಮ್ಮವರನ್ನು ನೇಮಕ ಮಾಡಿಕೊಳ್ಳಬೇಕೆಂಬ ವಿಚಾರ ಸರ್ಕಾರದವರ ಆಲೋಚನೆಯಲ್ಲಿದೆ ಎಂದು ಆಗಲೇ ಉತ್ತರ ಕೊಟ್ಟೆ.

ಶ್ರೀ ಬಿ. ಹುಚ್ಚೇಗೌಡರು.—ಹೆಸರುಘಟ್ಟದಲ್ಲಿ ಕುದುರೆ ಸಾಕುತ್ತಿದ್ದಿರಿ ಅಲ್ಲವೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹೌದು, remount breeding, pony breeding ಮಾತ್ರ ಇಟ್ಟುಕೊಂಡಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ಇದನ್ನು ಕೂಡ ಕುಣಿಗಲ್ ಸ್ಟಡ್‌ಫಾರಂಗೇ ಏಕೆ ವರ್ಗಾಯಿಸಬಾರದು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪ್ರಯೋಜನರು ಆಗುವುದಿಲ್ಲವೆಂದು ಹೇಳುತ್ತಾರೆ.

ಶ್ರೀ ಬಿ. ಹುಚ್ಚೇಗೌಡರು,—1951ರಿಂದ ಕುದುರೆ ಜೂಜನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲವೇ ?

The Hon'ble Sri T. MARIAPPA.— That does not arise out of this question.

ಶ್ರೀ ಬಿ. ಹುಚ್ಚೇಗೌಡರು.—ಈ ಕುಣಿಗಲ್ ಸ್ಟಡ್ ಫಾರಂಗೆ ಯಾವ ಬಾಬಿನಿಂದ ಹುಟ್ಟುವಳಿ ಬರುತ್ತದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕುದುರೆಗಳನ್ನು ಸಾಕಿ ಮಾರಾಟ ಮಾಡುವುದರಿಂದ ಬರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಇದಕ್ಕೆ ಅನೇಕ ಕಾವಲುಗಳನ್ನು ಸೇರಿಸಿ ಎಕರೆಗೆ 20–30 ರೂಪಾಯಿನಂತೆ ಕೊಟ್ಟಿರುವುದರಿಂದ ತಾನೆ ವರ್ಷಾದಾಯ ಜಾಸ್ತಿ ಕಾಣುತ್ತಾ ಇರುವುದು ?

The Hon'ble Sri T. MARIAPPA.— I want notice to verify that information.

ಶ್ರೀ ಬಿ. ಹುಚ್ಚೇಗೌಡರು.—ಈ ಖರ್ಚನ್ನು ಅವರೇ ಪೂರ್ತಿ ವಹಿಸಿಕೊಳ್ಳುತ್ತಾರೆಯೇ ಅಥವಾ ಅವರು ಎಷ್ಟು ವಹಿಸಿಕೊಳ್ಳಬೇಕು ಎಂದು ದಾಮಾಷಾ ಹಾಕಿದ್ದೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮಗೆ ಯಾವ ಖರ್ಚೂ ಬೀಳುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ತಾವು ತೋರಿಸಿರುವ ಖರ್ಚಿನಲ್ಲಿ ಹುಲ್ಲು ಕೊಯ್ಯುವುದು ಇತ್ಯಾದಿ ಶಿಬ್ಬಂದಿ ಖರ್ಚೂ ಸೇರಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟಾದರೆ ಕೊಡಬೇಕು ಎಂಬ ಒಂದು figure ಇದೆ. ಅದು ಸೇರಿರುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ನಮಗಿಂತ ಎರಡರಷ್ಟು ಬೇರೆಯವರ ಕುದುರೆಗಳನ್ನು ಸಾಕುತ್ತಾ ಇರುವುದ

ರಿಂದ ದಾಮಾಷಾ ಪ್ರಕಾರ ಇಷ್ಟು ಎಕರೆ ಹುಲ್ಲು ಕುಯ್ಯುವುದು ಇತ್ಯಾದಿ ಖರ್ಚಿಗೆ ಅವರು ಭಾಗ ವಹಿಸುತ್ತಾರೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Reduction of expenditure ನೋಡಿದರೆ ಗೊತ್ತಾಗುತ್ತದೆ. 1947-48ರಲ್ಲಿ 1,18,395 ಇದ್ದುದು 1950ನೇ ಡಿಸೆಂಬರ್‌ಗೆ 72,223ಕ್ಕೆ ಇಳಿದಿದೆ.

ಶ್ರೀ ಬಿ. ಹುಚ್ಚೇಗೌಡರು.—ಆದಾಯ ಕಡಿಮೆ ಆಗಿ ಖರ್ಚು ಜಾಸ್ತಿಯಾಗಿದೆ ಇದಕ್ಕೆ ಕಾರಣವೇನು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವರ್ಷ ಆದಾಯ ಬರುತ್ತದೆ. Perhaps at the end of 1950–51 it may just balance.

ಶ್ರೀ ಬಿ. ಹುಚ್ಚೇಗೌಡರು:—ಹಾಗಾದರೆ ಇನ್ನು ಮುಂದೆ self-supporting ಆಗಿರುತ್ತದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೇ ಉದ್ದೇಶದಿಂದಲೇ ರೇಸ್ ಕ್ಲಬ್‌ನವರನ್ನು ನಮ್ಮ confidence ಗೆ ತೆಗೆದುಕೊಂಡು ಅವರ mares ಕೊಟ್ಟರೆ ಬ್ರೀಡ್ ಮಾಡಿಸುತ್ತೇವೆ.

ಶ್ರೀ ಬಿ. ಹುಚ್ಚೇಗೌಡರು.—ಇದರಂತೆಯೇ ಡೈರಿ ಫಾರಂ ಮಾಡಿದರೆ ಉತ್ತಮ ಸಹಕಾರಿಯಾಗುವುದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅಲ್ಲಿ ಅಂತಹ ಒಳ್ಳೆಯ ಹುಲ್ಲು ಬರತಕ್ಕ ಜಾಗ ಇಲ್ಲ, ಡೈರಿಫಾರಂ ಮಾಡಿರುವ ಉದಾಹರಣೆ ಕಡಿಮೆ. Self-supporting ಆಗುವುದಕ್ಕೆ ಬೇಕಾದಷ್ಟು ಮಾರ್ಗಗಳಿವೆ.

ಶ್ರೀ ಬಿ. ಹುಚ್ಚೇಗೌಡರು.—ಅಲ್ಲಿ ಕುರಿಗಳು ಇವೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—250 ಕುರಿಗಳಿವೆ.

ಶ್ರೀ ಬಿ. ಹುಚ್ಚೇಗೌಡರು.—ಆ ಕುರಿಗಳು ಕುದುರೆಗಳ ಜೊತೆಯಲ್ಲಿ ಚೆನ್ನಾಗಿ ಅಭಿವೃದ್ಧಿಯಾಗುತ್ತಾ ಇವೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಿಳಿಯೂ ನೋಡಿದ್ದೀರಿ. ಚೆನ್ನಾಗಿ ಅಭಿವೃದ್ಧಿಯಾಗಿವೆ, mutton type sheeps ಅನೇಕವು ಇವೆ.

ಶ್ರೀ ಬಿ. ಹುಚ್ಚೇಗೌಡರು.—ಅಲ್ಲಗೆ ಬದಲಾಯಿಸಿದ ಮೇಲೆ 28 ಕುರಿಗಳು ಮೂರು ದಿನದಲ್ಲೇ ಸತ್ತದ್ದು ಗೊತ್ತಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಆ ಕುರಿಗಳು ಅಲ್ಲಿಗೆ ಎಲ್ಲಿಂದ ಬಂತು ಸ್ವಾಮಿ?

The Hon'ble Sri T. MARIAPPA.—That does not arise out of this question but still I do not want an impression to be left here. Sheep Farm ಮಾಡಿದ ಮೇಲೆ ಅಲ್ಲಿದ್ದ 250 ಕುರಿಗಳೇ ಈಗ ಈ ಫಾರಂನಲ್ಲಿ ಇವೆ.

ಶ್ರೀ ಬಿ. ಹುಚ್ಚೇಗೌಡರು.—ಅವುಗಳ ಪೈಕಿ ಕೆಲವು ಕುರಿಗಳು ಸತ್ತುಹೋದವು. ಅದು ತಮಗೆ ಗೊತ್ತಿಲ್ಲವೇ?

Mr. SPEAKER.—There is no use of discussing that matter.

ಶ್ರೀ ಬಿ. ಹುಚ್ಚೇಗೌಡರು.—ಹಾಗಾದರೆ ಅಲ್ಲಿ ಕುರಿಗಳ ಅಭಿವೃದ್ಧಿ ಚೆನ್ನಾಗಿ ಆಗುತ್ತದೆ ಎಂದು ಅನುಭವ ಇದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—Mutton type sheeps thrive ಆಗುತ್ತವೆ, ಏನೂ ತೊಂದರೆ ಇಲ್ಲ ಎಂದು ಪ್ರವೀಣರು ಹೇಳಿದ್ದಾರೆ.

ಶ್ರೀ ಎಂ ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಅಲ್ಲಿ ಸಾಕತಕ್ಕ ಕುದುರೆಗಳನ್ನು ಯಾವುದಕ್ಕೆ ಉಪಯೋಗಿಸುತ್ತಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ರೇಸ್‌ಗೆ ಅಂತ ಆರಂಭದಲ್ಲೇ ಹೇಳಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಅದಲ್ಲದೆ ಮೈಸೂರು ದೇಶದಲ್ಲಿ ಎಷ್ಟು ಉಪಯೋಗಕ್ಕೆ ಬರುತ್ತವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಷ್ಟು ಎಂದು ಹೇಳುವುದಕ್ಕಾಗುವುದಿಲ್ಲ. ಕುದುರೆಮರಿ ತೆಗೆದುಕೊಂಡು ಹೋಗಿ ಬೊಂಬಾಯಿನಲ್ಲಿ ಹರಾಜು ಮಾಡುತ್ತಾರೆ, ಒಳ್ಳೆಯ ಬೆಲೆ ಗಿಟ್ಟುತ್ತದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಈ ಪ್ರಾಂತೀಯ ಸರ್ಕಾರಗಳವರು ಕುದುರೆ ಜೂಜನ್ನು ನಿಲ್ಲಿಸಬೇಕೆಂದು ಯೋಚನೆ ಮಾಡುತ್ತಿರುವುದು ತಮ್ಮ ಗಮನದಲ್ಲಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಇನ್ನು ಮುಂದೆ ಸರ್ಕಾರದವರು ಆ ಫಾರಂನ್ನು ನಡೆಸಿಕೊಂಡು ಬರುವ ಅವಶ್ಯಕತೆ ಇಲ್ಲ ಎಂಬುದನ್ನು ಮನಗಂಡಿದ್ದಾರೆಯೇ?

The Hon'ble Sri T. MARIAPPA.—That question does not arise.

ಶ್ರೀ ಎಂ. ಗೋವಿಂದರೆಡ್ಡಿಯವರು.—ಕುದುರೆ ಜೂಜಿನ ಉದ್ದೇಶದಿಂದ ಅಲ್ಲದೆ ಇನ್ನಾವುದಾದರೂ ಕುದುರೆಗಳು ಅಲ್ಲಿ ಬೆಳೆಯುತ್ತಿವೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ, ಅದು ಆಮೇಲೆ ಯೋಚನೆಮಾಡಬೇಕಾದ್ದು. ಈ ಕೂಡಲೇ ಯೋಚನೆ ಮಾಡುವುದಕ್ಕೆ ಇನ್ನೂ ಕಾಲ ಸನ್ನಿಹಿತವಾಗಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಒಂದೊಂದು ಕುದುರೆಗೆ ಸರಾಸರಿ ಎಷ್ಟು ಖರ್ಚು ಬೀಳುತ್ತದೆ?

The Hon'ble Sri T. MARIAPPA.—I want notice. It depends on various factors.

ಶ್ರೀ ಎಂ. ಗೋವಿಂದರೆಡ್ಡಿಯವರು.—ಕುದುರೆ ಸಾಕುವುದಕ್ಕೆ ಆಗುವ ಖರ್ಚು ನೋಡಿದರೆ ಆನೆ ಸಾಕಿದಹಾಗೆ ಆಗುವುದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದರ ಬೆಲೆಯೂ ಕೂಡ ಹಾಗೆಯೇ ಬರುತ್ತದೆ. ಒಂದೊಂದು ಕುದುರೆಗೆ 40-45 ಸಾವಿರ ರೂಪಾಯಿ ಕೊಟ್ಟು ಕೊಂಡುಕೊಳ್ಳುತ್ತಾರೆ.

ಶ್ರೀ ಡಿ. ಗೋವಿಂದದಾಸ್‌ರವರು (ಹಾಸನ ಜಿಲ್ಲೆ—ನಿನ್ನ ಪಂಗಡ).—ಸ್ಪಡ್ ಫಾರಂನಲ್ಲಿ ಹಾಲಿ ಇರತಕ್ಕ ಬೀಜದ ಕುದುರೆಗಳ ಸಂಖ್ಯೆ ಎಷ್ಟು?

The Hon'ble Sri T. MARIAPPA.—I want notice.

ಶ್ರೀ ಡಿ. ಗೋವಿಂದದಾಸ್‌ರವರು.—ಸರ್ಕಾರದ ಖರ್ಚಿನಿಂದ ಸಾಕುತ್ತಾ ಇರುವ ಕುದುರೆಗಳ ಸಂಖ್ಯೆ ಎಷ್ಟು?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಆ ಸಂಖ್ಯೆ ಉತ್ತರದಲ್ಲಿ ಕೊಟ್ಟಿದೆ.

ಶ್ರೀ ಡಿ. ಗೋವಿಂದದಾಸ್‌ರವರು.—ಕುದುರೆಗಳನ್ನು ಪರದೇಶದಿಂದ ತರಿಸುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಹೌದು. Breeding horses ಪರದೇಶದಿಂದಲೇ ತರಿಸುವುದು.

ಶ್ರೀ ಡಿ. ಗೋವಿಂದದಾಸ್‌ರವರು.—ಅಲ್ಲರತಕ್ಕ ಬೀಜದ ಕುದುರೆಗಳ ಬೆಲೆ ಎಷ್ಟೆಂಬುದನ್ನು ಹೇಳುತ್ತೀರಾ?

The Hon'ble Sri T. MARIAPPA.—I want notice.

Mr. SPEAKER.—Question time is over.

SHORT NOTICE QUESTION.

Sri V. S. NARAYANA RAO (Bangalore City—General).—Sir, I had given notice of a Short Notice Question and it is more than four days since I handed it over. I do not know what has become of it.

Mr. SPEAKER.—Answers from Government are expected. They have not yet been received.

Voting on Demands for Grants for 1951-52.

Mr. SPEAKER (The Hon'ble Sri V. Venkatappa).—Voting on Demands for Grants for 1951-52 will be resumed. Demands No. 26 to 38 will be placed before the House to-day. The Hon'ble Minister for Finance and Industries may move Demand No. 26.

DEMAND No. 26—INDUSTRIES AND SUPPLIES.

43. Industries and Supplies (except Sericulture).

The Hon'ble Sri H. C. DASAPPA (Minister for Finance and Industries).—Sir, on the recommendation of His Highness the Maharaja, I beg to move :

"That a sum not exceeding Rs. 35,73,600 be granted to the Government to defray the charges which will come in course of payment during the year ending 31st day of March 1952, in respect of 'Industries and Supplies' (except Sericulture) "

Mr. SPEAKER.—Motion moved.—

"That a sum not exceeding Rs. 35,73,600 be granted to the Government te defray the charges which will come in course of payment during the year ending 31st day of March 1952, in respect of 'Indastries and Supplies' (except Sericulture,) "

Cut motion No. 102. II list. Sri A. Bheemappa Naik.

Proposal for Management by Joint Stock Companies of certain industries started by Government.

Sri A. BHEEMAPPA NAIK (Chitaldrug District—General).—Sir, I beg to move.

"That the demand under the head 1943. Industries and Supplies (except Sericulture') for Rs 35,73 600 be reduced by Rs. 100 (to consider the desirability of retaining only the basic and key industries under the control of the State Government and arranging the control of other industries started by Government to be managed by Joint-Stock Companies with some Government share in them)."

ಸ್ವಾಮಿ, ಮೈಸೂರು ದೇಶ ಬಹಳ ದಿವಸಗಳಿಂದಲೂ ಕೈಗಾರಿಕೆಗಳನ್ನು ಸರ್ಕಾರದ ಹಣದಿಂದಲೇ ನಡೆಸಿಕೊಂಡು ಬಂದಿದೆ ಹೀಗಾಗಿ ಈಗ ರಾಷ್ಟ್ರೀಕರಣ ಎಂದು ಏನು ಹೇಳುತ್ತಿದ್ದಾರೋ ಆದನ್ನು ಮೈಸೂರು ದೇಶದಲ್ಲಿ ಬಹಳ ದಿವಸಗಳ ಹಿಂದೆಯೇ ಜಾರಿಗೆ ತಂದು ಕೆಲವು ಕೈಗಾರಿಕೆಗಳನ್ನು ಹಿಂದಿನಿಂದಲೂ ರಾಷ್ಟ್ರೀಕರಣ ಮಾಡಿಕೊಂಡು ಬಂದಿದ್ದಾರೆ. ಇದರಲ್ಲಿ ಜನತೆಗೆ ಅತ್ಯಗತ್ಯವಾಗಿರುವ ವಸ್ತುಗಳನ್ನು ತಯಾರು ಮಾಡತಕ್ಕ ಕೈಗಾರಿಕೆಗಳನ್ನೂ ಮತ್ತು ಕಚ್ಚಾ ಮಾಲುಗಳನ್ನು ತಯಾರು ಮಾಡಿ ಅದರಿಂದ ನಡೆಸಬಹುದಾದ ಕೈಗಾರಿಕೆಗಳನ್ನು Key or Basic ಕೈಗಾರಿಕೆಗಳೆಂದು ಯಾವುದನ್ನು ಕರೆಯುತ್ತಾರೋ ಅಂತಹ ಕಬ್ಬಿಣದ ಕಾರ್ಖಾನೆ, ವಿದ್ಯುಚ್ಛಕ್ತಿಯನ್ನು ತಯಾರು ಮಾಡತಕ್ಕ ಕಾರ್ಖಾನೆ ಮತ್ತು ವಿದ್ಯುಚ್ಛಕ್ತಿಯ ಸಲಕರಣೆಗಳನ್ನು ಅಥವ ಅದಕ್ಕೆ ಬೇಕಾದ ಸಾಮಾನುಗಳನ್ನು ತಯಾರು ಮಾಡತಕ್ಕ ಕಾರ್ಖಾನೆ, ಸಿಮೆಂಟು ಕಾರ್ಖಾನೆ, ಕಾಗದದ ಕಾರ್ಖಾನೆ ಇವುಗಳನ್ನೆಲ್ಲಾ ಒಂದು ದೃಷ್ಟಿಯಿಂದ ಬೇಸಿಕ್ ಕೈಗಾರಿಕೆಗಳೆಂದು ಕರೆಯಬಹುದು. ಇವುಗಳಲ್ಲದೆ ಇನ್ನು ಕೆಲವು ಅಂದರೆ, ಸೋಪು, ಸಿರ್ಕಫೀರೇಚರ್, ಪೋರ್ಸೆಲೀನ್ ಮುಂತಾದ ಇನ್ನೂ ಕೆಲವು ಕೈಗಾರಿಕೆಗಳನ್ನೂ ಮೈಸೂರು ಸರ್ಕಾರ ಬೆಳೆಸಿಕೊಂಡು ಬಂದಿದೆ. ಹೀಗೆ ಸರ್ಕಾರ ಬೆಳೆಸಿಕೊಂಡು ಬಂದಿತಕ್ಕ ಕೈಗಾರಿಕೆಗಳ ಫಲ ಹೇಗಿದೆಯೆಂದರೆ, ಇತ್ತೀಚೆಗೆ ಇಡೀ ಭಾರತದಲ್ಲಿ ವಸ್ತುಗಳ ಅಭಾವ ಬಂದಾಗ ಮೈಸೂರು ದೇಶ ಹಾಕಿಕೊಂಡು ಬಂದಿರುವ ಒಂದು ಒಳ್ಳೆಯ ಮಾರ್ಗದಿಂದ ದೇಶಕ್ಕೆ ಎಷ್ಟು ಸಹಕಾರಿಯಾಯಿತು, ಎಷ್ಟು ಉಪಕಾರವಾಯಿತು ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಕಬ್ಬಿಣದ ಕಾರ್ಖಾನೆ ಒಂದು ಬಿಳಿಯ ಆನೆ, ಇದಕ್ಕೆ ಹೆಚ್ಚು ಸರ್ಕಾರದ ಹಣವನ್ನು ಹಾಕಬಾರದು ಎಂದು ಕೆಲವು ಜನರು ಹೇಳಿದರೂ ಕೂಡ ಜಂದಿನ ಸರ್ಕಾರ ಅವನ್ನು ಗಮನಿಸದೆ ಆ ಕೈಗಾರಿಕೆಯನ್ನು ಬೆಳೆಸಿಕೊಂಡು ಬಂದದ್ದರಿಂದ ಯುದ್ಧಕಾಲದಲ್ಲಿ ವಸ್ತುಗಳ ಅಭಾವ ಕಾಲದಲ್ಲಿ ಅದು ಎಷ್ಟು ಅನುಕೂಲ ಮಾಡಿತು, ಇದರಿಂದ ಮನೆಗಳನ್ನು ಕಟ್ಟುವವರಿಗೆ ಎಷ್ಟು ಉಪಕಾರವಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ.